ಧಾರವಾಡದಲ್ಲಿರುವ ಪರಿಸರ ಜೀವಿಶಾಸ್ತ್ರ ಕಛೇರಿ

1677 (2254) ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿ ಪರಿಸರ ಮತ್ತು ಜೀವಿ ಶಾಸ್ತ್ರ ಇಲಾಖೆಯು ಯಾವ ವರ್ಷದಲ್ಲಿ ಪ್ರಾರಂಭವಾಗಿದೆ ಹಾಗೂ ಸದ್ಯ ಇರುವ ಕಛೇರಿಯಲ್ಲಿಯ ಅಧಿಕಾರಿಗಳ ಮತ್ತು ಸಿಬ್ಬಂದಿ ಹುದ್ದೆಗಳು ಮತ್ತು ಸಂಖ್ಯೆ ಒದಗಿಸುವುದು;

ಆ) ಸದರಿ ಕಛೇರಿಯು ತನ್ನ ಅಧಿಕಾರದ ವ್ಯಾಪ್ತಿಯಲ್ಲಿ ಯಾವ ಮಹತ್ವದ ಕಾರ್ಯಗಳನ್ನು ಮಾಡಿ ಪರಿಸರ ಸಂರಕ್ಷಣೆ ಮಾಡಿರುವ ಬಗ್ಗೆ ವರ್ಷವಾರು ವಿವರವಾದ ಮಾಹಿತಿ ಒದಗಿಸುವುದು;

ಇ) ಧಾರವಾಡದ ಕಟ್ಟಡದ ಕಛೇರಿಯ ಕೆಲಸ ಪೂರ್ಣವಾಗಿದೆಯೇ? ಅದರ ಉದ್ಘಾಟನೆ ಎಂದು ನೆರವೇರಲಿದೆ?

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು).

ಅ) ಪರಿಸರ ಹಾಗೂ ಜೀವಿಶಾಸ್ತ್ರ ಇಲಾಖೆಯ ಅಡಳಿತ ಕಾರ್ಯವ್ಯಾಪ್ತಿಗೆ ಬರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಧಾರವಾಡ ಪ್ರಾದೇಶಿಕ ಕಛೇರಿಯು 26-12-1986 ರಿಂದ ಹಾಗೂ ವಿಭಾಗೀಯ ಕಛೇರಿಯು 28-06-96 ರಿಂದ ಕಾರ್ಯ ನಿರ್ವಹಿಸುತ್ತಿದೆ.

ವಿಭಾಗೀಯ ಮತ್ತು ಪ್ರಾದೇಶಿಕ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳ ವಿವರ ಈ ಕೆಳಗೆ ನಮೂದಿಸಿದೆ.

ಕ್ರ.ಸಂ.	ಅಧಿಕಾರಿ ಸಿಬ್ಬಂದಿ	ಪ್ರಾದೇಶಿಕ ಕಛೇರಿ ಧಾರವಾಡ	ವಿಭಾಗೀಯ ಕಛೇರಿ ಧಾರವಾಡ
1.	ಪರಿಸರ ಅಧಿಕಾರಿ	-	01
2.	ಉಪ ಪರಿಸರ ಅಧಿಕಾರಿ	01	-
3.	ಸಹಾಯಕ ಪರಿಸರ ಅಧಿಕಾರಿ	03	03
4.	ಉಪ ವೈಜ್ಞಾನಿಕ ಅಧಿಕಾರಿ	01	-
5.	ಸಹಾಯಕ ವೈಜ್ಞಾನಿಕ ಅಧಿಕಾರಿ	02	-
6.	ಅಧೀಕ್ಷಕರು	-	01
7.	ಪ್ರಯೋಗಶಾಲಾ ಸಹಾಯಕ	02	-
8.	ದ್ವಿತೀಯ ದರ್ಜೆ ಸಹಾಯಕ	01	-
9.	ಕ್ಷೇತ್ರ ಸಹಾಯಕ	01	-
10.	ಜವಾನ	01	-
	ಒಟ್ಟು	12	05

ಅ) ಸದರಿ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಉದ್ದಿಮೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಮೇಲೆ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974, ವಾಯು (ನಿವಾರಣೆ ಮತ್ತು ನಿಯಂತ್ರಣ), 1981 ಮತ್ತು ಅಪಾಯಕರ ನಿರುಪಯುಕ್ತ ವಸ್ತುಗಳ (ನಿರ್ವಹಣಾ) ನಿಯಮಗಳು, 1989 ಜಾರಿಗೊಳಿಸಲಾಗುತ್ತಿದೆ. ಅಂದರೆ, ಹೊಸ ಉದ್ದಿಮೆಗಳು ಸ್ಥಾಪನೆ ಮಾಡುವಾಗ ಸ್ಥಳ ಪರಿಶೀಲನೆ ಮಾಲಿನ್ಯ ನಿಯಂತ್ರಣ ಘಟಕಗಳು ಇತ್ಯಾದಿಗಳ ಅಳವಡಿಕೆ ಹಾಗೂ ಉದ್ದಿಮೆಗಳು ಪ್ರಾರಂಭಿಸಿದ ಮೇಲೆ ಅಥವಾ ಈಗಾಗಲೇ ಇರುವ ಉದ್ದಿಮೆಗಳು ಅಳವಡಿಸಿರುವ ಮಾಲಿನ್ಯ ನಿಯಂತ್ರಣ ಶುದ್ದೀಕರಣ ಘಟಕಗಳ ಪರಿವೀಕ್ಷಣೆ, ನೀರಿನ ಮತ್ತು ವಾಯು ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ ಹಾಗೂ ಮೇಲೆ ವಿವರಿಸಿದ ನಿಯಮಗಳ ಅಡಿಯಲ್ಲಿ ಕಾಯ್ದೆಗಳ ಉಲ್ಲಂಘನೆ ಮಾಡಿದವರ ಮೇಲೆ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದೇ ರೀತಿಯಲ್ಲಿ ಸ್ಥಳೀಯ ಸಂಸ್ಥೆಗಳ ಮೇಲೆ ನಿಯಮಗಳನ್ನು ಜಾರಿ ಮಾಡುವುದು. ಜಲಮೂಲಗಳ ಗುಣಮಟ್ಟವನ್ನು ತಿಳಿಯಲು ಸದರಿ ಕಛೇರಿಯು ನದಿ ಮತ್ತು ಇನ್ನಿತರ ಜಲ ಮೂಲಗಳಿಂದ ಪ್ರತಿ ತಿಂಗಳು ನೀರಿನ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗುತ್ತಿದೆ. ಮೇಲೆ ವಿವರಿಸಲಾದ ಕ್ರಮಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿತ ನಿಯತವಾಗಿ ನಡೆಸುವ ಕಾರ್ಯ ಚಟುವಟಿಕೆಗಳಾಗಿರುತ್ತವೆ.

ಇ) ಧಾರವಾಡ ಕಟ್ಟಡದ ಕಾಮಗಾರಿಯು ಬಹುತೇಕ ಮುಗಿದಿದ್ದು ವಿದ್ಯುಚ್ಛಕ್ತಿಗಾಗಿ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದಿಂದ ಅನುಮತಿ ನಿರೀಕ್ಷಿಸಲಾಗಿದೆ. ಕೆಲವು ಸಣ್ಣ ಪುಟ್ಟ ಕಾಮಗಾರಿ ಕೆಲಸಗಳು ಗುತ್ತಿಗೆದಾರರಿಂದ ಬಾಕಿ ಇದೆ. ಈ ಕಟ್ಟಡದಲ್ಲಿ ಕ್ರಮವಾಗಿ ವಿಭಾಗೀಯ ಕಛೇರಿ ಹಾಗೂ ಪ್ರಾದೇಶಿಕ ಕಛೇರಿಗಳು ಸೆಪ್ಟೆಂಬರ್ 1999 ಮತ್ತು ಡಿಸೆಂಬರ್ 1999 ರಿಂದ ಸ್ವಾಧೀನಕ್ಕೆ ತೆಗೆದುಕೊಂಡು ಕಾರ್ಯ ನಿರ್ವಹಿಸುತ್ತಿವೆ. ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ದೊರಕಿದ ನಂತರ ಉದ್ಘಾಟನೆಯ ಕಾರ್ಯವನ್ನು ನೆರವೇರಿಸಲಾಗುವುದು.

ಧಾರವಾಡದಲ್ಲಿ ಆರ್ಟ್‌ಗ್ಯಾಲರಿ ಪ್ರಾರಂಭ

1678 (2255) ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಧಾರವಾಡ ಬಯಲು ನಾಟಕ ಗೃಹದ ಬಯಲು ಪ್ರದೇಶದಲ್ಲಿ ಒಂದು ಆರ್ಟ್‌ಗ್ಯಾಲರಿ ಕಟ್ಟುವ ಯೋಜನೆಯು ಸರ್ಕಾರದ ಮುಂದೆ ಇದೆಯೆ; ಸದರಿ ಗ್ಯಾಲರಿ ಕಟ್ಟಡಕ್ಕೆ ಆಯವ್ಯಯದಲ್ಲಿ ಮೀಸಲಿಟ್ಟ ಹಣವೆಷ್ಟು; (ವಿವರ ಒದಗಿಸುವುದು)

ಆ) ಬೆಂಗಳೂರು ನಂತರದ ಎರಡನೆ ದೊಡ್ಡ ಸಾಂಸ್ಕೃತಿಕ-ಶೈಕ್ಷಣಿಕ ಮಹಾನಗರದಲ್ಲಿ ವೆಂಕಟಪ್ಪ ಪ್ರಶಸ್ತಿ ವಿಜೇತರಾದ ಕರ್ನಾಟಕದಲ್ಲಿ ಪ್ರಪ್ರಥಮ ಚಿತ್ರ ಕಲಾಶಾಲೆ ಪ್ರಾರಂಭಿಸಿದ ಡಾ:ಡಿ.ವಿ.ಹಾಲಬಾಂವಿಯವರ ಹೆಸರು ಇಡಲು ಸರ್ಕಾರ ನಿರ್ಧರಿಸಿರುವುದು ನಿಜವೆ;

ಇ) ಸದರಿ ಆರ್ಟ್ ಗ್ಯಾಲರಿ ಮತ್ತು ಆಡಳಿತ ಜಿಲ್ಲಾ ಕಛೇರಿಯ ಸುಸಜ್ಜಿತ ಕಟ್ಟಡಕ್ಕೆ ಆಯವ್ಯಯದಲ್ಲಿ ಮೀಸಲಿಟ್ಟ ಹಣವೆಷ್ಟು (ವಿವರ ಒದಗಿಸುವುದು)?